# ‘ಚಂದಕ್ಕಿಂತ ಚಂದ..’!



ಜೂಲಿಯನ್–ಜೂಲಿಯಟ್ ದಂಪತಿ ಮಗುವಿನೊಂದಿಗೆ

ಚಿತ್ರ: ಬಿ.ಕೆ. ಜನಾರ್ದನ್

ಪ್ಯಾರಿಸ್ ನಗರಕ್ಕೆ ಸೌಂದರ್ಯ ಎಂಬುದು ಅನ್ವರ್ಥವಾಗಿ ಬಂದಿದೆ. ಪ್ಯಾರಿಸ್‌ನ ಐಫೆಲ್ ಟವರ್ ಅಂತೂ ಜಗತ್ಪಸಿದ್ಧ. ಅನೇಕ ಸುಂದರ ಪ್ರವಾಸಿ ತಾಣಗಳನ್ನೂ ಹೊಂದಿರುವ ಈ ನಗರ ಫ್ರಾನ್ಸ್‌ನ ರಾಜಧಾನಿಯೂ ಆಗಿದೆ. ಇಂತಹ ಸುಂದರ ನಗರದಿಂದ ಬೆಂಗಳೂರಿಗೆ ಬಂದ ಜೂಲಿಯನ್ ಗೌಪಿಟ್ ಮತ್ತು ಜೂಲಿಯರ್ಸ್ ಬೋರ್ಸೀರ್ ದಂಪತಿ ಮಾತ್ರ ಬೆಂಗಳೂರನ್ನು ‘ಅತಿ ಸುಂದರ ನಗರ’ ಎಂದು ಹೊಗಳುತ್ತಿದ್ದಾರೆ. ಹೀಗಾಗಿ ಇವರಿಗೆ ಬೆಂಗಳೂರು ಎಂದರೆ ‘ಚಂದಕ್ಕಿಂತ ಚಂದ..’!

ಪ್ರಕೃತಿ ಸಹಜವಾದ ಸೌಂದರ್ಯ ಪ್ಯಾರಿಸ್‌ಗೆ ಇದ್ದರೂ ಇಲ್ಲಿನ ಜೀವನಶೈಲಿ, ವಾತಾವರಣ, ಔದ್ಯೋಗಿಕ ಅವಕಾಶ, ಜನರ ಸ್ನೇಹಮಯ ಸಂಬಂಧ, ಕೆಲಸದಲ್ಲಿ ಹೊಂದಾಣಿಕೆ ಮನೋಭಾವದಂತಹ ಒಳ್ಳೆಯ ಅಂಶಗಳು ಜಗತ್ತಿನ ಯಾವ ದೇಶದಲ್ಲೂ ಇರಲಿಕ್ಕಿಲ್ಲ ಎಂಬ ಭಾವನೆ ಈ ದಂಪತಿಯದು.

ಜೂಲಿಯನ್ ಹೋಟೆಲ್ ಒಂದರಲ್ಲಿ ಸಿಇಒ, ಜೂಲಿಯಟ್ ಕಂಪೆನಿಯೊಂದರಲ್ಲಿ ಉದ್ಯೋಗಿ. 2009ರಲ್ಲಿ ಬೆಂಗಳೂರಿಗೆ ಬಂದ ಈ ದಂಪತಿಗೆ ಡಾಫ್ನೆ ಎಂಬ ಎರಡೂವರೆ ವರ್ಷದ ಮಗುವಿದೆ.

‘ನಾವು ಪ್ಯಾರಿಸ್‌ನಲ್ಲಿ ಕೆಲಸ ಮಾಡುತ್ತಿದ್ದೆವು. ಬೆಂಗಳೂರು ನಗರದ ಬಗ್ಗೆ ಇಂಟರ್‌ನೆಟ್‌ನಲ್ಲಿ ನೋಡಿ ಇಲ್ಲಿನ ಉದ್ಯೋಗಾವಕಾಶಗಳನ್ನು ತಿಳಿದುಕೊಂಡು ಇಲ್ಲಿಗೇ ಬರಲು ನಿರ್ಧರಿಸಿದೆವು. ಇಲ್ಲಿನ ಪ್ರಕೃತಿ ಸೌಂದರ್ಯ, ಹವಾಮಾನ ಇವರನ್ನು ಬಹುವಾಗಿ ಸೆಳೆಯಿತು. ಇಲ್ಲಿ ನೆಲೆ ನಿಂತ ಬಳಿಕದ ಪ್ರತಿಯೊಂದು ಸಂದರ್ಭವೂ ಪುಳಕ ತರುತ್ತದೆ’ ಎನ್ನುತ್ತಾರೆ ಜೂಲಿಯನ್.

ಹಾಗೆ ನೋಡಿದರೆ ಜೂಲಿಯನ್ ಹುಟ್ಟೂರಿನಿಂದ ಮೊದಲ ಬಾರಿಗೆ ದೇಶ ಬಿಟ್ಟು ಇಲ್ಲಿಗೆ ಬಂದಿರುವುದಲ್ಲ. ಇವರು ಎಂಬಿಎ ಓದಿದ್ದು ಸ್ವಿಟ್ಜರ್‌ಲಂಡ್‌ನಲ್ಲಿ. ಪ್ಯಾರಿಸ್‌ನಲ್ಲಿ ಉದ್ಯೋಗವನ್ನೂ ಹಿಡಿದಿದ್ದರು. ವೃತ್ತಿಯ ಮುಂದಿಯ ಪಯಣವಾಗಿ ಅಲ್ಲಿಂದ ಬೆಂಗಳೂರಿಗೆ ಬರಬೇಕಾಯಿತು. ಈಗ ಇಲ್ಲಿ ಸರಿಯಾಗಿ ಹೊಂದಿಕೊಂಡಿದ್ದಾರೆ ಜೂಲಿಯನ್.

‘ಇಲ್ಲಿನ ಸಂಸ್ಕೃತಿ ಸಂಪ್ರದಾಯ ಬಹಳ ಇಷ್ಟವಾಯಿತು. ಹೀಗಾಗಿ ಇಲ್ಲೇ ನೆಲೆ ನಿಲ್ಲುವ ನಿರ್ಧಾರ ಮಾಡಿದೆವು. ವೃತ್ತಿ ಜೀವನದ ಮಟ್ಟಿಗೆ ಹೇಳುವುದಾದರೆ ಇಲ್ಲಿ ಕೆಲಸದ ವಾತಾವರಣ (ವರ್ಕಿಂಗ್ ಅಟ್ಮಾಸ್ಫಿಯರ್) ಬಹಳ ಚೆನ್ನಾಗಿದೆ. ಸ್ನೇಹಮಯ ವಾತಾವರಣವಿದೆ. ಇಲ್ಲಿನ ಜನ ಹೊಂದಾಣಿಕೆಯಿಂದ ಕೆಲಸ ಮಾಡುತ್ತಾರೆ. ಯಾವುದೇ ಸಮಸ್ಯೆ ಬಂದರೂ ತಕ್ಷಣ ಸ್ಪಂದಿಸುತ್ತಾರೆ. ಎಲ್ಲರೂ ಒಂದಾಗಿ, ಒಟ್ಟಾಗಿ ಕೆಲಸ ಮಾಡುವುದರಲ್ಲಿ ಆನಂದ ಸಿಗುತ್ತದೆ’ ಎನ್ನುತ್ತಾರೆ ಜೂಲಿಯಟ್.

‘ಮೊದಲೇ ಹೇಳಿದಂತೆ ಪ್ಯಾರಿಸ್ ಸುಂದರ ನಗರ. ಕಲೆಯ ತವರು. ಪ್ಯಾರಿಸ್‌ನ ಇತಿಹಾಸ ರೋಚಕವಾದದ್ದು. ಸೌಂದರ್ಯದಲ್ಲಿ ಜಗತ್ತಿಗೇ ಹೆಸರುವಾಸಿಯಾದ ಈ ನಗರ ‘ಶಾಪಿಂಗ್ ಪ್ಯಾರಡೈಸ್’ ಕೂಡ ಹೌದು’ಮ ಎನ್ನುತ್ತಾರೆ ಜೂಲಿಯಟ್.

‘ಇಲ್ಲಿನ ಹಬ್ಬಗಳ ಆಚರಣೆ ನಮಗೆ ಥ್ರಿಲ್ಲಿಂಗ್ ಎಕ್ಸ್ ಪೀರಿಯನ್ಸ್ ನೀಡುತ್ತದೆ. ದಸರಾ, ಹೋಳಿ ಆಚರಣೆ ಮರೆಯುವ ಹಾಗೇ ಇಲ್ಲ. ಇಲ್ಲಿನ ಸ್ನೇಹಿತರ ಜತೆ ಸೇರಿ ನಾವೂ ಹಬ್ಬಗಳಲ್ಲಿ ಪಾಲ್ಗೊಳ್ಳುತ್ತೇವೆ. ಒಟ್ಟಾಗಿ ಊಟ ಮಾಡುತ್ತೇವೆ. ಇವೆಲ್ಲವೂ ನಮಗೆ ಹೊಸ ಅನುಭವ ನೀಡುತ್ತದೆ’ ಎನ್ನುತ್ತಾರೆ ಇವರು.

ಭಾರತದ ನಾನಾ ಪ್ರವಾಸಿ ತಾಣಗಳನ್ನು ಇವರು ಸುತ್ತು ಹಾಕಿ ಬಂದಿದ್ದಾರೆ. ನಂದಿಹಿಲ್ಸ್, ರಾಜಸ್ತಾನ, ಗೋವಾ, ಪುದುಚೇರಿ, ಕೇರಳ, ತಮಿಳುನಾಡು ಮುಂತಾದ ಪ್ರವಾಸಿ ತಾಣಗಳನ್ನು ನೋಡಿ ಕಣ್ತುಂಬಿಕೊಂಡ ಈ ಜೋಡಿಗೆ ಎಲ್ಲವೂ ಬಹಳ ಇಷ್ಟವಾಗಿದೆಯಂತೆ.

‘ದಕ್ಷಿಣ ಭಾರತದ ತಿಂಡಿಗಳಾದ ಮಸಾಲೆ ದೋಸೆ, ಇಡ್ಲಿ, ಪಾಯಸ ತುಂಬ ಇಷ್ಟ. ಉತ್ತರ ಭಾರತ ಶೈಲಿಯ ಊಟ ಬಹಳ ರುಚಿ. ಫ್ರೆಂಚ್ ಫುಡ್ ಅನ್ನೂ ತಿನ್ನುತ್ತೇವೆ. ಮನೆಯಲ್ಲಿ ಫ್ರೆಂಚ್ ಫುಡ್ ಮಾಡಿ ಸವಿಯುತ್ತೇವೆ. ಹೋಟೆಲ್‌ಗೂ ಆಗಾಗ ಹೋಗುತ್ತಿರುತ್ತೇವೆ’ ಎನ್ನುತ್ತಾರೆ ಜೂಲಿಯಟ್.

★ ಅವನೀಶ್